ಈ ಯೋಜನೆಯಡಿ ಅನುದಾನದ ಲಭ್ಯತೆ ಅನುಸರಿಸಿ ಪ್ರತಿ ವರ್ಷ ಗುರಿಯನ್ನು ನಿಗದಿಪಡಿಸಲಾಗುತ್ತಿದೆ.

ಈ) ಈ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ.

ಉ) 2013–14ನೇ ಸಾಲಿನ ವಾಜಪೇಯಿ ನಗರ ವಸತಿ ಯೋಜನೆಯಡಿ ಚಿಕ್ಕಬಳ್ಳಾಪುರ ನಗರಸಭೆಗೆ 125 ಮನೆಗಳ ಗುರಿಯನ್ನು ನೀಡಲಾಗಿದೆ. ನಗರ ಆಶ್ರಯ ಸಮಿತಿಯ ಇದುವರೆಗೆ 95 ಫಲಾನುಭವಿಗಳನ್ನು ಆಯ್ಕೆ ಮಾಡಿದೆ. 95 ಮನೆಗಳನ್ನು ನಿರ್ಮಿಸಲು ಕಾರ್ಯಾದೇಶವನ್ನು ನೀಡಲಾಗಿದೆ.

ಪ್ರವಾಸಿ ತಾಣಗಳನ್ನು ಖಾಸಗಿಯವರಿಗೆ ವಹಿಸುವುದು

238 (606), ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಕೆಲ ಸರ್ಕಾರಿ ಪ್ರವಾಸಿ ತಾಣಗಳನ್ನು ಖಾಸಗಿ ಸಂಸ್ಥೆಗಳ ಸಹಕಾರದೊಂದಿಗೆ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಅಂತಹ ಸಂಸ್ಥೆಗಳ ಆಯ್ಕೆ ಪಾರದರ್ಶಕವಾಗಿ ಇರಲಿದೆಯೇ; ಆಯ್ಕೆಗೆ ಯಾವ ಮಾನದಂಡ ಅನುಸರಿಸಲಾಗುವುದು;

ಇ) ಯಾವ ಯಾವ ಸರ್ಕಾರಿ ತಾಣವನ್ನು ಖಾಸಗಿಯವರ ಮೂಲಕ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ (ಸಂಪೂರ್ಣ ವಿವರ ನೀಡುವುದು)

ಈ) ಇಂತಹ ತಾಣಗಳಲ್ಲಿ ಪ್ರಸ್ತುತವಿರುವ ಸೌಲಭ್ಯಗಳು ಏನು; ಮುಂದೆ ಹೊಸದಾಗಿ ಸಿಗುವ ಅನುಕೂಲಗಳು ಯಾವುವು (ವಿವರ ನೀಡುವುದು)

ಉ) ಪ್ರಸ್ತುತ ಸರ್ಕಾರದ ಅಧೀನದಲ್ಲಿರುವ ಪ್ರವಾಸಿ ತಾಣಗಳಿಗೆ ವಾರ್ಷಿಕವಾಗಿ ಸರ್ಕಾರ ಖರ್ಚು ಮಾಡುತ್ತಿರುವ ಮೊತ್ತ ಎಷ್ಟು; ಅದರಿಂದ ಲಭಿಸುತ್ತಿರುವ ಅನುದಾನ ಎಷ್ಟು (ಸಮಗ್ರ ಆರ್ಥಿಕ ಸ್ಥಿತಿಗತಿ ವಿವರ ನೀಡುವುದು);

ಊ) ಇಲಾಖೆ ನಿರ್ವಹಣೆಯಲ್ಲಿರುವ ಪ್ರವಾಸಿ ತಾಣಗಳು ಲಾಭದಾಯಕವಾಗಿವೆಯೇ; ಲಾಭದಾಯಕವಾಗಿದ್ದರೆ, ವಾರ್ಷಿಕವಾಗಿ ಎಷ್ಟು ಲಾಭ ಲಭಿಸುತ್ತಿದೆ; ಇಲ್ಲವಾದರೆ ಕಳೆದ ಮೂರು ವರ್ಷದಲ್ಲಿ ಆಗಿರುವ ನಷ್ಟದ ಪ್ರಮಾಣ ಎಷ್ಟು (ವರ್ಷವಾರು ಮಾಹಿತಿ ನೀಡುವುದು)?

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಹೌದು.

ಆ) ಹೌದು.

ಈ ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರವು ಒಂದು ಯೋಜನಾ ಅನುಷ್ಠಾನ ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯ ಮುಂದೆ ಆಸಕ್ತ ಕಾರ್ಪೋರೇಟ್ ಸಂಸ್ಥೆಗಳು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು. ಪ್ರವಾಸಿ ತಾಣಗಳನ್ನು ದತ್ತು ನೀಡುವ ಸಂಬಂಧ ಆಸಕ್ತ ಕಾರ್ಪೋರೇಟ್ ಸಂಸ್ಥೆಗಳು ಸಲ್ಲಿಸುವ ಪ್ರಸ್ತಾವನೆಗಳ ಹಿರಿತನದ ಆಧಾರದ (First Come, First Serve) ಮೇಲೆ ಸಂಸ್ಥೆಗಳನ್ನು ಆಯ್ಕೆ ಮಾಡಲಾಗುವುದು. ತದನಂತರ ಎಂ.ಒ.ಯು. ಮಾಡಿಕೊಂಡು ಪ್ರವಾಸಿ ತಾಣಗಳನ್ನು ನಿರ್ವಹಣೆ ಮಾಡಲು ವಹಿಸಿಕೊಡಲಾಗುವುದು. ಇದರಿಂದಾಗಿ ಸರ್ಕಾರಕ್ಕೆ ಯಾವುದೇ ಹಣಕಾಸಿನ ಹೊರೆ ಇರುವುದಿಲ್ಲ.

ಇ) ಪ್ರಾರಂಭಿಕವಾಗಿ 46 ಪ್ರವಾಸಿ ತಾಣಗಳನ್ನು ಈ ಯೋಜನೆ ಅಡಿ ಅನುಷ್ಠಾನಗೊಳಿಸಲು ಗುರುತಿಸಲಾಗಿದೆ. ವಿವರಗಳನ್ನು ಅನುಬಂಧ–1

ರಲ್ಲಿ ಒದಗಿಸಿದೆ. ಇವುಗಳಷ್ಟೇ ಅಲ್ಲದೆ ಕಾರ್ಪೋರೇಟ್ ಸಂಸ್ಥೆಗಳು ಅಭಿವೃದ್ಧಿಪಡಿಸಲು ಆಸಕ್ತಿ ವ್ಯಕ್ತಪಡಿಸುವ ಎಲ್ಲಾ ಪ್ರವಾಸಿ ತಾಣಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುವುದು.

ಈ) ಈ ತಾಣಗಳಲ್ಲಿ ಪ್ರಸ್ತುತ ಯಾತ್ರಿನಿವಾಸ, ಡಾರ್ಮಿಟರಿ, ಕುಡಿಯುವ ನೀರು, ಶೌಚಾಲಯ ಇತ್ಯಾದಿ ಪ್ರವಾಸಿ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆ. ಮುಂದೆ ಈ ಯೋಜನೆಯ ಅನುಷ್ಠಾನದ ನಂತರ ದತ್ತು ಪಡೆಯುವ ಸಂಸ್ಥೆಗಳ ವತಿಯಿಂದ ಪ್ರಸ್ತುತ ಇರುವ ಸೌಲಭ್ಯಗಳ ನಿರ್ವಹಣೆ ಹಾಗೂ ಇನ್ನಿತರ ಅಗತ್ಯ ಸೌಲಭ್ಯಗಳಾದ ಅಂದರೆ ಪ್ರವಾಸಿ ತಾಣದಲ್ಲಿ ಸ್ವಚ್ಛತೆ ಕಾಪಾಡುವುದು, ಶೌಚಾಲಯಗಳ ನಿರ್ಮಾಣ, ಸವೋನಿಯರ್ ಶಾಪ್ ನಿರ್ಮಾಣ, ಫುಡ್‌ಕೋರ್ಟ್‌ಗಳ ಸ್ಥಾಪನೆ, ಪ್ರವಾಸಿ ಮಾರ್ಗದರ್ಶಿಗಳ ಸೇವೆ ಒದಗಿಸುವುದು, ಇಂಟರ್‌ಪ್ರಿಟೇಷನ್ ಸೆಂಟರ್‌ಗಳ ಮತ್ತು ಮ್ಯೂಸಿಯಂಗಳ ಸ್ಥಾಪನೆ ಹಾಗೂ ಉನ್ನತೀಕರಣ, ಸೈನೇಜ್‌ಗಳ ಅಳವಡಿಕೆ, ಆಡಿಯೋ ಗೈಡ್ಸ್ ಸೇವೆ ಒದಗಿಸುವುದು, ಸ್ಮಾರಕಗಳ ದೀಪಾಲಂಕಾರ, ಘನತ್ಯಾಜ್ಯ ನಿರ್ವಹಣೆ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ಅವಕಾಶವಿರುತ್ತದೆ.

ಉ) ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ 2014–15ನೇ ಸಾಲಿನಲ್ಲಿ ₹ 30877.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. ಇದರಿಂದ ಲಭಿಸುತ್ತಿರುವ ಆದಾಯವನ್ನು ಪ್ರತ್ಯಕ್ಷವಾಗಿ ಅಂದಾಜು ಮಾಡಲು ಸಾಧ್ಯವಿರುವುದಿಲ್ಲ. ಬದಲಿಗೆ ಪರೋಕ್ಷವಾಗಿ ವಾಣಿಜ್ಯ ತೆರಿಗೆ ಇಲಾಖೆ, ಸಾರಿಗೆ ಇಲಾಖೆ, ಅಬಕಾರಿ ಇಲಾಖೆ, ಕೇಂದ್ರ ಪುರಾತತ್ವ ಇಲಾಖೆ, ರಾಜ್ಯ ಪುರಾತತ್ವ ಇಲಾಖೆ, ಕೃಷ್ಣಭಾಗ್ಯ ಜಲನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ಅರಮನೆ ಮಂಡಳಿ, ಮೈಸೂರು, ಮೃಗಾಲಯ ಪ್ರಾಧಿಕಾರ ಮೈಸೂರು ಇತ್ಯಾದಿ ಸಂಸ್ಥೆಗಳ ಮೂಲಕ ತೆರಿಗೆ/ಶುಲ್ಕಗಳ, ಪ್ರವೇಶ ಶುಲ್ಕಗಳ ರೂಪದಲ್ಲಿ ಪರೋಕ್ಷವಾಗಿ ಪ್ರವಾಸೋದ್ಯಮದಿಂದ ಆದಾಯ ಸೃಜನೆಯಾಗುತ್ತಿದೆ.

ಊ) ಪ್ರವಾಸೋದ್ಯಮ ಇಲಾಖೆಯ ನೇರ ನಿರ್ವಹಣೆಯಲ್ಲಿ ಯಾವುದೇ ಪ್ರವಾಸಿ ತಾಣಗಳೂ ಇರುವುದಿಲ್ಲ. ಇಲಾಖೆಯು ನಿರ್ಮಿಸುವ ಸೌಲಭ್ಯಗಳನ್ನು ಸಾಮಾನ್ಯವಾಗಿ ನಿರ್ವಹಣೆ ಮಾಡಲು ಕೆ.ಎಸ್.ಟಿ.ಡಿ.ಸಿ. ಅಥವಾ ಜೆ.ಎಲ್.ಆರ್. ಸಂಸ್ಥೆಗಳಿಗೆ ವಹಿಸಲಾಗುವುದು. ಇಲ್ಲವೇ ಖಾಸಗೀಕರಿಸುವುದು.

ಪ್ರವಾಸೋದ್ಯಮ ಇಲಾಖೆಯು ಒಂದು ಸೇವಾ ಆಧಾರಿತ ಇಲಾಖೆಯಾಗಿರುತ್ತದೆ. ಪ್ರವಾಸೋದ್ಯಮದಿಂದಾಗಿ ಪರೋಕ್ಷ ಆದಾಯವನ್ನು ನಿರೀಕ್ಷಿಸಬಹುದೇ ಹೊರತು ಪ್ರತ್ಯಕ್ಷ ಆದಾಯವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹೀಗಾಗಿ ಪ್ರವಾಸಿಗರ ಭೇಟಿಯಿಂದ ತೆರಿಗೆ, ವ್ಯಾಪಾರ, ಸಾರಿಗೆ ಮುಂತಾದ ಮೂಲಗಳಿಂದ ಮಾತ್ರ ಸರ್ಕಾರಕ್ಕೆ ಆದಾಯ ನಿರೀಕ್ಷಿಸಬಹುದು. ಪ್ರತಿಯೊಂದು ಪ್ರವಾಸಿ ತಾಣದ ಆದಾಯವನ್ನು ಅಂದಾಜಿಸುವುದು ಕಷ್ಟಸಾಧ್ಯವಾಗಿರುತ್ತದೆ.

ಅನುಬಂಧ-1

ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಅಡಿ ಪ್ರವಾಸಿ ತಾಣಗಳ ದತ್ತು ತೆಗೆದುಕೊಳ್ಳುವ ಕಾರ್ಯಕ್ರಮ ಅನುಷ್ಠಾನ ಸಂಬಂಧ ಪ್ರಾರಂಭಿಕವಾಗಿ ಗುರುತಿಸಿರುವ ಪ್ರವಾಸಿ ತಾಣಗಳ ಪಟ್ಟಿ

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಪ್ರವಾಸಿ ತಾಣದ ಹೆಸರು
1	ಬಾಗಲಕೋಟೆ	ಬಾದಾಮಿ	1. ಪಟ್ಟದಕಲ್ಲು 2 ಬಾದಾಮಿ 3. ಬನಶಂಕರಿ 4. ಮಹಾಕೂಟ
		ಹುನಗುಂದ	5. ಐಹೊಳೆ
2	ಬೆಂಗಳೂರು ನಗರ	ಬೆಂಗಳೂರು	6. ವೆಂಕಟಪ್ಪ ಆರ್ಟ್ ಗ್ಯಾಲರಿ 7. ಕಬ್ಬನ್ ಪಾರ್ಕ್ ಹತ್ತಿರ ಅಕ್ವೇರಿಯಂ 8 ಲಾಲ್‌ಬಾಗ್ 9. ಟಿಪ್ಪು ಅರಮನೆ 10. ವಿಶ್ವೇಶ್ವರಯ್ಯ ಮ್ಯೂಸಿಯಂ 11. ಸ್ವಾತಂತ್ರ್ಯ ಉದ್ಯಾನವನ
		ಬೆಂಗಳೂರು ದಕ್ಷಿಣ	12. ಮುತ್ಯಾಲಮಡುವು 13 ಬನ್ನೇರುಘಟ್ಟ
3	ಬೆಂಗಳೂರು ಗ್ರಾಮಾಂತರ	ನೆಲಮಂಗಲ	14. ಶಿವಗಂಗೆ
4	ಬೆಳಗಾವಿ	ಬೈಲಹೊಂಗಲ	15. ಕಿತ್ತೂರು
5	ಬಳ್ಳಾರಿ	ಹೊಸಪೇಟೆ	16. ಹಂಪಿ 17. ತುಂಗಭದ್ರ ಡ್ಯಾಂ
6	ಬೀದರ್	ಬೀದರ್	18. ಬೀದರ್ ಕೋಟೆ
7	ಬಿಜಾಪುರ	ಬಿಜಾಪುರ	19. ಗೋಲ್‌ಬುಂಜ್ ಮತ್ತು ಬಿಜಾಪುರದಲ್ಲಿರುವ ಇತರ ಸ್ಮಾರಕಗಳು
8	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	20 ನಂದಿ ಬೆಟ್ಟ
			21. ಟಿಪ್ಪುವಿನ ಜನ್ಮಸ್ಥಳ ಭೋಗ ನಂದೀಶ್ವರ ದೇವಾಲಯ

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಪ್ರವಾಸಿ ತಾಣದ ಹೆಸರು
9	ಚಿಕ್ಕಮಗಳೂರು	ತರೀಕೆರೆ	22. ಕೆಮ್ಮಣ್ಣುಗುಂಡಿ
10	ಚಿತ್ರದುರ್ಗ	ಹಿರಿಯೂರು	23. ವಾಣಿವಿಲಾಸ ಸಾಗರ
11	ದಾವಣಗೆರೆ	ಚೆನ್ನಗಿರಿ	24. ಶಾಂತಿ ಸಾಗರ
12	ಗದಗ	ಗದಗ	25. ಲಕ್ಕುಂಡಿ
13	ಹಾಸನ	ಬೇಲೂರು	26. ಬೇಲೂರು 27. ಹಳೇಬೀಡು
		ಚನ್ನರಾಯಪಟ್ಟಣ	28. ಶ್ರವಣಬೆಳಗೊಳ
14	ಕೊಡಗು	ಮಡಿಕೇರಿ	29. ರಾಜಾಸೀಟ್ 30. ಅಬ್ಬೆ ಫಾಲ್ಸ್
15	ಕೊಪ್ಪಳ	ಗಂಗಾವತಿ	31. ಆನೆಗುಂದಿ
16	ಮಂಡ್ಯ	ಮದ್ದೂರು	32. ಕ್ಯೊಕ್ಕರೆ ಬೆಳ್ಳೂರು
		ಶ್ರೀರಂಗಪಟ್ಟಣ	33. ಶ್ರೀರಂಗಪಟ್ಟಣ 34 ಬೃಂದಾವನ ಗಾರ್ಡನ್ 35. ರಂಗನತಿಟ್ಟು ಪಕ್ಷಿಧಾಮ 36 ಬಲಮುರಿ ಫಾಲ್ಸ್/ಸಂಗಮ
17	ಮೈಸೂರು	ಟಿ. ನರಸೀಪುರ	37. ತಲಕಾಡು 38. ಸೋಮನಾಥಪುರ
		ನಂಜನಗೂಡು	39. ನಂಜನಗೂಡು
18	ರಾಯಚೂರು	ರಾಯಚೂರು	40. ರಾಯಚೂರು ಕೋಟೆ
19	ರಾಮನಗರ	ಕನಕಪುರ	41. ಮೇಕೆದಾಟು
20	ಶಿವಮೊಗ್ಗ	ಸಾಗರ	42. ಜೋಗ್‌ಫಾಲ್ಸ್
21	ಉಡುಪಿ	ಕುಂದಾಪುರ	43. ಮಲ್ಪೆ ಬೀಚ್ 44. ಸೇಂಟ್ ಮ್ಯಾರಿಸ್ ದ್ವೀಪ
22	ಉತ್ತರ ಕನ್ನಡ	ಶಿರಸಿ	45. ಯಾಗೂರು ಬೀಚ್ 46. ಮುರಡೇಶ್ವರ